**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ/35-2/ಎಲ್ಆರ್‌ಡಿಸಿ/ಎನ್‌ಬಿಎ/2014-15

**ನಿರ್ದೇಶಕರವರ ಕಛೇರಿ,**
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560001
ಅರಮನೆ ರಸ್ತೆ
ದಿನಾಂಕ:13.10.2016

**ಸುತ್ತೋಲೆ**

ವಿಷಯ : ಮಾನ್ಯತಾ ಸಂಬಂಧಿ ಕಾರ್ಯಚಟುವಟಿಕೆಗಳ ಕಾರ್ಯಗಾರವನ್ನು ಹಮ್ಮಿಕೊಳ್ಳುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದ ಪಾಲಿಟೆಕ್ನಿಕ್‌ಗಳ ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟು, ಎಲ್ಲಾ ಪ್ರೋಗ್ರಾಂಗಳಿಗೆ ಮಾನ್ಯತೆ ಪಡೆಯುವುದು ಅವಶ್ಯವಾಗಿರುತ್ತದೆ ಹಾಗೂ ನಿಯಮಿತ ಕಾಲಾವಧಿಯೊಳಗೆ ಈ ಪ್ರಕ್ರಿಯೆಯನ್ನು ಮುಗಿಸುವ ಹಿನ್ನಲೆಯಲ್ಲಿ ಮೊದಲ ಹಂತದ ರಾಜ್ಯದ 16 ಪಾಲಿಟೆಕ್ನಿಕ್‌ಗಳ 32 ಪ್ರೋಗ್ರಾಂಗಳನ್ನು ಗುರುತಿಸಿರುವುದು ಸರಿಯಷ್ಟೆ.

ಮುಂದುವರೆದು, ಜೆ.ಎಸ್.ಎಸ್ ಮಹಿಳಾ ಪಾಲಿಟೆಕ್ನಿಕ್, ಮೈಸೂರು ಇಲ್ಲಿ ಇತ್ತೀಚೆಗೆ ರಾಷ್ಟ್ರೀಯ ಮಾನ್ಯತಾ ಮಂಡಳಿಯ ಪ್ರತಿನಿಧಿಗಳು ಭೇಟಿ ನೀಡಿ ಮೌಲ್ಯಮಾಪನವನ್ನು ಕೈಗೊಂಡಿರುವ ಹಿನ್ನಲೆಯಲ್ಲಿ, ಎನ್.ಬಿ.ಎ ಮಾನ್ಯತೆಯನ್ನು ಪಡೆಯುವ ಸಂಬಂಧ ಆ ಸಂಸ್ಥೆಯ ಪ್ರಾಂಶುಪಾಲರು ಹಾಗೂ ಸಿಬ್ಬಂದಿವರ್ಗದವರ ಅನುಭವ, ಅನಿಸಿಕೆಗಳು ಹಾಗೂ ಪೂರ್ವಸಿದ್ದತಾ ಕಾರ್ಯಕ್ರಮಗಳ ಬಗ್ಗೆ ಮಾಹಿತಿಯನ್ನು ಪಡೆಯುವುದು ಸೂಕ್ತವೆಂದು ಪರಿಗಣಿಸಿ, ಸದರಿ ಸಂಸ್ಥೆಯಲ್ಲಿ ದಿನಾಂಕ: 17.10.2016 ರಂದು ಬೆಳಿಗ್ಗೆ 11.00 ಘಂಟೆಯಿಂದ ಸಂಜೆ 5.00 ರವರೆಗೆ ಒಂದು ದಿನದ ಮಾನ್ಯತಾ ಸಂಬಂಧಿ ಚಟುವಟಿಕೆಗಳ ಕಾರ್ಯಗಾರವನ್ನು ನಡೆಸಿಕೊಡಲು ಪ್ರಾಂಶುಪಾಲರು, ಜೆ.ಎಸ್.ಎಸ್ ಮಹಿಳಾ ಪಾಲಿಟೆಕ್ನಿಕ್, ಮೈಸೂರು ಇವರಿಗೆ ಈ ಮೂಲಕ ಸೂಚಿಸಲಾಗಿದೆ.

ಈ ಸಂಬಂಧ ಮೇಲ್ಕಂಡ ಕಾರ್ಯಗಾರಕ್ಕೆ ಸಿಪಿಸಿ ಪಾಲಿಟೆಕ್ನಿಕ್, ಮೈಸೂರು, ಸರ್ಕಾರಿ ಪಾಲಿಟೆಕ್ನಿಕ್, ಕೆ.ಆರ್ ಪೇಟೆ ಮತ್ತು ಸರ್ಕಾರಿ ಪಾಲಿಟೆಕ್ನಿಕ್, ಚಾಮರಾಜನಗರಗಳ ಪ್ರಾಂಶುಪಾಲರುಗಳು, ಮಾನ್ಯತೆಗೆ ಆಯ್ಕೆಯಾದ ಪ್ರೋಗ್ರಾಂಗಳ ವಿಭಾಗಾಧಿಕಾರಿಗಳು, ಮಾನ್ಯತಾ ಸಂಯೋಜಕರುಗಳು ಹಾಗೂ ಸಂಸ್ಥೆಯ ಮಾನ್ಯತಾ ಸಂಯೋಜಕರುಗಳು ಕಡ್ಡಾಯವಾಗಿ ಹಾಜರಾಗಿ ಮಾನ್ಯತಾ ಚಟುವಟಿಕೆಗಳ ಕುರಿತು ಉದ್ಭವಿಸುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆದು ಈ ಕಾರ್ಯಗಾರದ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದು ಈ ಮೂಲಕ ಸೂಚಿಸಲಾಗಿದೆ. ಅಲ್ಲದೇ ಇಲಾಖಾವತಿಯಿಂದ ಶ್ರೀ ರವಿಚಂದ್ರನ್ ಎನ್, ಜಂಟಿ ನಿರ್ದೇಶಕರು, ಸತೀಶ ರ ಹುದ್ದಾರ, ಉಪ ನಿರ್ದೇಶಕರು, ಜಗದೀಶ.ಡಿ.ಹೆಚ್, ಅಭಿವೃದ್ಧಿ ಅಧಿಕಾರಿಗಳು, ಡಾ. ಗುರುಪ್ರಸಾದ ಎಂ.ಹೂಗಾರ, ಎಸ್.ಜಿ ವೆಂಕಟೇಶಬಾಬು, ಬಿ.ಎಸ್ ವಾಸುಕಿ, ಭರತ್‌ಲಾಲ್ ಎ.ಆರ್, ಮಾನ್ಯತಾ ಸಂಯೋಜಕರು, ಈ ಕಾರ್ಯಗಾರಕ್ಕೆ ಹಾಜರಾಗಲು ಸಹ ಸೂಚಿಸಲಾಗಿದೆ.

ಈ ಕಾರ್ಯಗಾರದಲ್ಲಿ ಭಾಗವಹಿಸುವ ಅಧಿಕಾರಿಗಳ ಗೈರುಹಾಜರಿಯನ್ನು ಅನ್ಯಕಾರ್ಯನಿಮಿತ್ತ ಎಂದು ಪರಿಗಣಿಸಿ ಮತ್ತು ಸದರಿ ಅಧಿಕಾರಿಗಳು ಕೆ.ಸಿ.ಎಸ್.ಆರ್ ನಿಯಮಗಳ ಪ್ರಕಾರ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗೆ ಅರ್ಹರಾಗಿರುತ್ತಾರೆ.

ನಿರ್ದೇಶಕರು

13/10/16 13/10/16.

ಪ್ರತಿ:

1. ಪ್ರಾಂಶುಪಾಲರು, ಜೆ.ಎಸ್.ಎಸ್ ಮಹಿಳಾ ಪಾಲಿಟೆಕ್ನಿಕ್, ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
2. ಮೇಲೆ ತಿಳಿಸಿದ ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಪ್ರಾಂಶುಪಾಲರು, ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್, ಮೈಸೂರು, ಸರ್ಕಾರಿ ಪಾಲಿಟೆಕ್ನಿಕ್, ಕೆ.ಆರ್ ಪೇಟೆ ಮತ್ತು ಸರ್ಕಾರಿ ಪಾಲಿಟೆಕ್ನಿಕ್, ಚಾಮರಾಜನಗರ ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
4. ಇ-ಆಡಳಿತ ಸಂಯೋಜಕರ ಸೂಕ್ತ ಕ್ರಮಕ್ಕಾಗಿ.
5. ನಿರ್ದೇಶಕರ ಆಪ್ತ ಸಹಾಯಕರ ಮಾಹಿತಿಗಾಗಿ.